# ಆರ್‌ಬಿಐ ವಿಶೇಷ ವಿದ್ಯುನ್ಮಾನ ನಿಧಿಗಳ ವರ್ಗಾವಣೆಯನ್ನು ಪ್ರಾರಂಭಿಸುತ್ತಿದೆ

ಮಾರ್ಚ್ 31, 2003

ಭಾರತೀಯ ರಿಸರ್ವ್ ಬ್ಯಾಂಕು ಇತರ ಬ್ಯಾಂಕುಗಳ ಸಹಯೋಗದೊಂದಿಗೆ, ವಿಶೇಷ ವಿದ್ಯುನ್ಮಾನ ನಿಧಿಗಳ ವರ್ಗಾವಣೆ (ಎಸ್‌ಇಎಫ್‌ಟಿ) ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯು, ದೇಶದ ಅನೇಕ ಕೇಂದ್ರಗಳಲ್ಲಿನ ಬ್ಯಾಂಕ್‌ಗಳ ಶಾಖೆಗಳಾದ್ಯಂತ ವಿದ್ಯುನ್ಮಾನ ರೀತಿಯಲ್ಲಿ ನಿಧಿಗಳ ವರ್ಗಾವಣೆಯನ್ನು ಸುರಕ್ಷಿತವಾಗಿ, ಸುಭದ್ರವಾಗಿ ಮತ್ತು ಶೀಘ್ರವಾಗಿ ಸಾಧ್ಯಗೊಳಿಸುತ್ತದೆ. ಯೋಜನೆಯನ್ನು ಮುಂಬಯಿಯಲ್ಲಿ ನಡೆಯುವ ಒಡಂಬಡಿಕೆಯೊಂದಿಗೆ, 1ನೇ ಏಪ್ರಿಲ್ 2003ರಿಂದ ಅಂತರ-ಬ್ಯಾಂಕ್ ನಿಧಿಗಳ ವರ್ಗಾವಣೆಗಳಿಗಾಗಿ ಜಾರಿಗೆ ತರಲಾಗುತ್ತದೆ.

ಯೋಜನೆಯ ಮುಖ್ಯ ಲಕ್ಷಣಗಳು ಈ ಕೆಳಕಂಡಂತಿವೆ:

- ಯೋಜನೆಯಡಿ, ಭಾಗವಹಿಸುವ ಯಾವುದೇ ಶಾಖೆಗಳಲ್ಲಿ ಇಟ್ಟುಕೊಂಡು ಬಂದಿರುವ ಖಾತೆಗಳ ನಡುವೆ ಅದೇ ದಿನದಂದು, ಅಂತರಬ್ಯಾಂಕ್ ನಿಧಿಗಳ ವರ್ಗಾವಣೆಯನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗಿದೆ.
- ಯೋಜನೆಯು, ಎಸ್‌ಇಎಫ್‌ಟಿ ಸಂದೇಶಗಳನ್ನು ವಿದ್ಯುನ್ಮಾನ ರೀತಿಯಲ್ಲಿ ಮತ್ತು ಶೀಘ್ರವಾಗಿ ಕಳುಹಿಸಬಹುದಾದ ಹಾಗೆ ಪರಸ್ಪರ ಸಂಬಂಧ ಕಲ್ಪಿಸಿದ ಗಣಕ ಯಂತ್ರಗಳನ್ನು ಹೊಂದಿರುವ ಬ್ಯಾಂಕ್‌ಗಳ ಶಾಖೆಗಳನ್ನು ಒಳಗೊಳ್ಳುತ್ತದೆ.
- ಎಸ್‌ಇಎಫ್‌ಟಿ ಯೋಜನೆಯಡಿ ಅಂತರಬ್ಯಾಂಕ್ ಇತ್ಯರ್ಥ ವ್ಯವಸ್ಥೆಯನ್ನು ರಾಷ್ಟ್ರೀಯ ತೀರುವೆ ಕೇಂದ್ರ, ಭಾರತೀಯ ರಿಸರ್ವ್ ಬ್ಯಾಂಕು, ನಾರಿಮನ್ ಪಾಯಿಂಟ್, ಮುಂಬಯಿ, ಇಲ್ಲಿ ಮಾಹಿತಿಯನ್ನು ಪರಿಶೀಲಿಸಲಾಗುವುದು.
- ಭಾನುವಾರ ಬಿಟ್ಟು ಉಳಿದ ದಿನಗಳಲ್ಲಿ ಮೂರು ಎಸ್‌ಇಎಫ್‌ಟಿ ಇತ್ಯರ್ಥ ಆವರ್ತಗಳಿರುತ್ತದೆ/ಮಧ್ಯಾಹ್ನ 12.00, 2.00 ಮತ್ತು 4.00 ಗಂಟೆ) ಹಾಗೂ ಶನಿವಾರದಂದು ಎರಡು ಹಣ ಸಂದಾಯಗಳು, ಮಧ್ಯಾಹ್ನ 12.00 ಮತ್ತು 2.00 ಗಂಟೆಗೆ.
- ಆಂತರಿಕ ಎಸ್‌ಇಎಫ್‌ಟಿ ವಿನಂತಿಗಳಿಗೆ ಸಂಬಂಧಿಸಿದ ಜಮೆಯನ್ನು, ಇತ್ತೀಚಿನ ಮುಂದಿನ ಇತ್ಯರ್ಥ ಆವರ್ತಕ್ಕೆ ಮುಂಚೆ ಫಲಾನುಭವಿಯ ಖಾತೆಗೆ ನೀಡಲಾಗುವುದು.
- ಫಲಾನುಭವಿಯ ಖಾತೆಗೆ ಒದಗಿಸಲಾದ ಯಾವುದೇ ಜಮೆಗಳನ್ನು, ಮುಂದಿನ ಇತ್ಯರ್ಥ / ಹಣ ಸಂದಾಯ ಆವರ್ತದ ಅವಧಿಯಲ್ಲಿ ಹಿಂದಿರುಗಿಸಲಾಗುವುದು, ತಪ್ಪಿದಲ್ಲಿ, ಜಮೆಗಳನ್ನು ಮಾಡಲಾಗಿದೆಯೆಂದು ಭಾವಿಸಲಾಗುವುದು.
- ಎಸ್‌ಇಎಫ್‌ಟಿ ಅಡಿಯಲ್ಲಿ ಇತ್ಯರ್ಥ ಆವರ್ತಗಳು, ಈಗಿರುವ ಇಎಫ್‌ಟಿ ಯೋಜನೆಗಿಂತ ವಿಭಿನ್ನವಾಗಿರುತ್ತದೆ. ಅದು, ಎಸ್‌ಇಎಫ್‌ಟಿ ವ್ಯವಸ್ಥೆಯನ್ನು ಅಳವಡಿಸಿದ ನಂತರವೂ ಕೂಡಾ ನಿರ್ವಹಿಸಲು ಮುಂದುವರಿಯುತ್ತದೆ.
- ಎಸ್‌ಇಎಫ್‌ಟಿ ಮೂಲಕ ಒಳಗೊಂಡ ಸರಿಸುಮಾರು 2500 ಶಾಖೆಗಳು 500 ನಗರಗಳಿಗೆ ಸಂಪರ್ಕ ಸೇತುವೆಯಾಗಿದೆ.

ಯೋಜನೆಯು, ಪ್ರಸ್ತಾವಿತ ಟಿ + 2 ಆಧಾರಿತ ರೋಲಿಂಗ್ ಇತ್ಯರ್ಥದಡಿ, ಷೇರು ಮಾರುಕಟ್ಟೆಗಳಲ್ಲಿನ ಭದ್ರತೆಗಳಲ್ಲಿ ಹಣ ಸ್ವೀಕರಿಸುವ ಮತ್ತು ಹಣ ಸಂದಾಯದ ಸಕಾಲಿಕ ಇತ್ಯರ್ಥಗಳನ್ನು ಸುಲಭಗೊಳಿಸುತ್ತದೆ.

ಬ್ಯಾಂಕ್ ಶಾಖೆಗಳ ಪಟ್ಟಿಯು ಸೇರಿದಂತೆ ಹೆಚ್ಚಿನ ವಿವರಗಳು ಆರ್.ಬಿ.ಐ ವೆಬ್ ಸೈಟ್, www.rbi,org,in ನಲ್ಲಿ ಲಭ್ಯವಿದೆ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/1018